ಇಪ್ಪತ್ತೈದು ವರ್ಷಗಳಿಂದ ಶೇಷಗಿರಿ ಪುರೋಹಿತ ಮತ್ತು ಪ್ರೇಮಚಂದ ಕಂಪನಿಯ ಬ್ರ್ಯಾಂಚ್ ಆಫೀಸಿನಲ್ಲಿ ಕೂಡಿಯೇ ಕೆಲಸ ಮಾಡುತ್ತಿದ್ದರೂ ಅವರಿಬ್ಬರ ನಡುವೆ ಹೇಳಿಕೊಳ್ಳುವಂತಹ ಗೆಳೆತನವೇನಿರಲಿಲ್ಲ. ನಗರಸಭೆ ಎಲೆಕ್ಷನ್‌ನಲ್ಲಿ ಕೇಶವರಾವ್ ಸಾಳುಂಕೆ ಅವರ ಅಳಿಯನ ಗೆಲುವಿಗಾಗಿ ತನ್ನ ಸಮುದಾಯದ ಮತಗಳನ್ನು ಕ್ರೋಢೀಕರಿಸುವಲ್ಲಿ ನೆರವಾಗಿದ್ದ ಶೇಷಗಿರಿ ಪುರೋಹಿತ ಆ ಒಂದು ಕಾರಣದಿಂದ ಕಂಪನಿಯ ಮುಖ್ಯಸ್ಥರಿಗೆ ಹತ್ತಿರವಾಗಿದ್ದ. ಅಂತರಂಗದಲ್ಲಿ ಮಾತ್ರವಲ್ಲದೆ ಬಾಹ್ಯನೋಟದಲ್ಲೂ ತನ್ನ ಸಮುದಾಯದ ಎಲ್ಲ ಲಕ್ಷಣಗಳನ್ನು ರೂಢಿಸಿಕೊಂಡಿದ್ದ ಶೇಷಗಿರಿ ಸಮಾಜದಲ್ಲೂ ತಕ್ಕಮಟ್ಟಿಗೆ ಹೆಸರು ಸಂಪಾದಿಸಿದ್ದ. ಬಾಗಿಲು ತೆರೆದು ಹೊರಬಂದ ಶೇಷಗಿರಿ ಪುರೋಹಿತನನ್ನು ಗುರುತಿಸಲು ಪ್ರೇಮಚಂದನಿಗೆ ಕೆಲವು ಕ್ಷಣಗಳೇ ಹಿಡಿದವು. ಭ್ರೂಮಧ್ಯದಲ್ಲಿ ಪ್ರತಿಷ್ಠಾಪಿತಗೊಂಡ ಮಂತ್ರಾಕ್ಷತೆ ಸಹಿತ ಉದ್ದನೆಯ ತಿಲಕ, ಹಣೆಯ ಎಡಬಲದಲ್ಲಿ ಗಂಧದಿಂದ ನಿರ್ಮಾಣಗೊಂಡ ಶಂಕ ಮತ್ತು ಚಕ್ರ, ತಲೆಯ ಹಿಂಭಾಗದಲ್ಲಿ ದೃಷ್ಟಿಗೆ ಗೋಚರವಾಗುವ ಶಿಖೆ ಕಳೆದ ಇಪ್ಪತ್ತೈದು ವರ್ಷಗಳಿಂದ ನೋಡುತ್ತಿದ್ದ ಆ ಪರಿಚಿತ ಚಹರೆಯ ಬದಲು ಅಪರಿಚಿತ ಚಹರೆ ಎದುರು ನಿಂತಂತೆ ಭಾಸವಾಯಿತು. ಮುಖದಲ್ಲಿ ತಿಲಕ, ಶಂಕ, ಚಕ್ರ ಮಾಯವಾಗಿದ್ದವು. ತಲೆಯ ಹಿಂದಿನ ಶಿಖೆ ತುಂಡಾಗಿತ್ತು.

'ಬಾರಯ್ಯ ಪ್ರೇಮಚಂದ, ಕಾಲಕ್ಕೆ ತಕ್ಕಂತೆ ವೇಷ ಧರಿಸದಿದ್ದರೆ ಬದುಕೋದು ಕಷ್ಟ ಕಣಯ್ಯಾ ಈ ಜಗತ್ತಿನಲ್ಲಿ. ಐದು ವರ್ಷಗಳ ಹಿಂದೆ ಮಧ್ವಾರಾಧನೆ ದಿನ ಮಠದಿಂದ ಸನ್ಮಾನಿತರಾಗುವವರ ಪಟ್ಟಿಯಲ್ಲಿ ನಿನ್ನ ಹೆಸರು ಸೇರಿಸೊದಕ್ಕ ಹರಸಾಹಸ ಮಾಡಬೇಕಾಯ್ತು. ಕೊನೆಗೂ ಮಠದವರು ನೀನು ನಮ್ಮ ಸಮುದಾಯದವನೇ ಅಲ್ಲ ಅಂತ ಹಟ ಹಿಡಿದು ಪಟ್ಟಿಯಿಂದ ನಿನ್ನ ಹೆಸರು

